

ವಿಜ್ಞಾನದಲ್ಲಿ ತುಂಬಾ ಆಸಕ್ತಿಯಿದ್ದ ಅವನು ಗ್ರಹಚಾರ ಕಾಲದಲ್ಲಿ ಕಷ್ಟಗಳಿಗೆ ಸಿಲುಕಿ ಓದನ್ನು ಮುಂದುವರಿಸಲಾಗದೆ ಗಡಿಯಾರದ ವ್ಯಾಪಾರ ಆರಂಭಿಸಿದ. ಮೊದಲು ಹೊಸ ಗಡಿಯಾರಗಳನ್ನು ಮಾರುತ್ತಿದ್ದ ಆದಿಮೂರ್ತಿ ಕಾಲ ಸರಿದಂತೆ ಹಳೇ ಗಡಿಯಾರ ರಿಪೇರಿ ಮಾಡುವವನಾಗಿದ್ದ. ತನ್ನ ಆಸೆ ಈಡೇರಿಸಿಕೊಳ್ಳಲಾಗದೆ, ವ್ಯವಹಾರದಲ್ಲೂ ಏಳಿಗೆ ಕಾಣದೆ, ಖಿನ್ನ ಮನಃಸ್ಥಿತಿಯಿಂದ ಅವನು ವಿಚಿತ್ರ ವ್ಯಕ್ತಿಯಂತೆ ಕಾಣಿಸುತ್ತಿದ್ದ. ಅವನ ಬಳಿ ಮಾತನಾಡಲು ಹೋದವರಿಗೆ ಅವನ ಮಾತು ಕೆಲವು ಸರ್ತಿ ಹುಚ್ಚುತನದ ಬಡಬಡಿಕೆ ಎನ್ನಿಸುತ್ತಿತ್ತು. ಈ ವಿಷಯಗಳು ರಮೇಶನಿಗೆ ಚೆನ್ನಾಗಿ ತಿಳಿದಿದ್ದವು. ಮತ್ತು ಅವನ ಬಗ್ಗೆ ಕೊಂಚ ಕನಿಕರವೂ ಇತ್ತು.

ಕಟ್ಟಡ ಒಡೆಯಬೇಕೆಂದು ನಿರ್ಧರಿಸಿದಾಗ ಎಲ್ಲರಿಗೂ ಲಿಖಿತ ಸೂಚನೆ ನೀಡಿದ್ದ ರಮೇಶ. ಎಲ್ಲಾ ಅಂಗಡಿಯವರು, ಬಾಡಿಗೆ ಮನೆಯವರು ಖಾಲಿ ಮಾಡಿದರೂ ಗಡಿಯಾರದಂಗಡಿ ತೆರವಾಗಲಿಲ್ಲ. ಹೆಚ್ಚಿನ ಗಲಾಟೆ, ಘರ್ಷಣೆಯಿಲ್ಲದೆ ಅಂಗಡಿ ಖಾಲಿಯಾಗಬೇಕು ಎನ್ನುವುದು ರಮೇಶನ ಇರಾದೆ. ಅದಕ್ಕೆ ತನ್ನ ಬದಲು ಬೇರೆಯವರನ್ನು ಕಳುಹಿಸಿ ಕೆಲಸ ಮುಗಿಸಲು ನಿರ್ಧರಿಸಿದ! ಬಂಟ ಸಿದ್ದನನ್ನು